ಶ್ರೀ ಎಚ್. ಕೆ. ಕಂವಾರಸ್ವಾಮಿ.—ಆಧ್ಯಕ್ಷರೇ, ೧೮ ಪರ್ಸೆಂಟ್ ಕೊಟ್ಟಿರುವುದು ಸಂತೋಷ. ಆದರೆ ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ೨-೧೦ ವರ್ಷಗಳ ಕಾಲ ಕಾಂಟ್ರಾಕ್ಟ್ ಆಧಾರದ ಮೇಲೆ ಸೇವೆ ಮಾಡಿದವರಿಗೆ ನಮ್ಮ ಸರ್ಕಾರ ಪರ್ಸೆಂಟ್ ಮಾಡಿತ್ತು. ಇಂತಹವರಿಗೆ ೧೮ ಪರ್ಸೆಂಟ್ ಕೊಡುವ ಬಗ್ಗೆ ನಾನು ಗಮನ ಸೆಳೆದಿದ್ದೇನೆ. ೨ ವರ್ಷ ಪ್ರೊಬೇಷನರಿ ಹಾಗೂ ೫ ವರ್ಷ ಅನುಭವ ಇರುವವರಿಗೆ ಆದ್ಯತೆ ಕೊಡುತ್ತಿದ್ದೀರಿ. ೮-೧೦ ವರ್ಷ ಆಗಿರುವ ಇನ್ ಸರ್ವೀಸ್ ಡಾಕ್ಟರ್ಸ್‌ಗೆ ಆದ್ಯತೆ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇರತಕ್ಕ ಕಾಯ್ದೆ ಪ್ರಕಾರ ಎಸ್.ಸಿ./ಎಸ್.ಟಿ. ಕ್ಯಾಂಡಿಡೇಟ್ಸ್ ಭರ್ತಿ ಆಗದೇ ಇದ್ದರೆ ಎರಡನೆಯದಾಗಿ ಅದನ್ನು ರಿಲ್ಯಾಕ್ಸ್ ಮಾಡಿಕೊಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಬಗ್ಗೆ ತೀವ್ರವಾಗಿ ಪರಿಗಣಿಸಿ ಅವಕಾಶ ಕೊಡುವ ಬಗ್ಗೆ ಪ್ರಯತ್ನ ಮಾಡಲಾಗುವುದು.

(2) ಜಿಲ್ಲಾ ಮಂಟ್ಪದ ಶಿಕ್ಷಕರ ನೇಮಕಾತಿ ಸಮಿತಿಗಳು ಕೆಲಸ ಮಾಡದೇ ಇರುವುದರಿಂದ ಟಿ.ಸಿ. ಹೆಚ್, ತರಬೇತಿ ಪಡೆದ ನಿರುದ್ಯೋಗಿಗಳಿಗೆ ಉಂಟಾಗಿರುವ ತೊಂದರೆ,—

ಶ್ರೀ ವೆಂಕಟರಾಮಯ್ಯ.—ಜಿಲ್ಲಾ ಮಟ್ಟದ ಶಿಕ್ಷಕರ ನೇಮಕಾತಿ ಸಮಿತಿಗಳು ಕೆಲಸ ಮಾಡದೇ ಇರುವುದರಿಂದ ಟಿ. ಸಿ. ಎಚ್. ತರಬೇತಿ ಪಡೆದ ನಿರುದ್ಯೋಗಿಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣದ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್.—ಆಧ್ಯಕ್ಷರೇ, ಈಗಾಗಲೇ ಸ್ಥಳೀಯ ನೇಮಕಾತಿ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಇವುಗಳ ರಚನೆ ಮಾಡಿದ ಮೇಲೆ ಒಂದೂ ಸಮಿತಿಗಳೂ ಸ್ವಲ್ಪ ತಿಂಗಳ ಕಾಲ ಕೆಲಸ ಮಾಡಿಲ್ಲ. ಕೇಂದ್ರ ಸರ್ಕಾರ ಕೆಲವು ಆರ್ಥಿಕ ನಿಬಂಧನೆಗಳನ್ನು ಹಾಕಿದ ಕಾರಣ ಇವುಗಳು ಕೆಲಸ ಮಾಡುವುದಕ್ಕೆ ಆಗಲಿಲ್ಲ. ಈಗ ಶಿಕ್ಷಕರ ನೇಮಕಾತಿಯನ್ನು ಮಾಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಏನು ಖಾಲಿ ಹುದ್ದೆಗಳು ಇವೆ ಅವನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಆರ್ ವೆಂಕಟರಾಮಯ್ಯ.—ಅರ್ಜಿಗಳನ್ನು ಎಲ್ಲಾ ಜಿಲ್ಲೆಗಳಿಂದಲೂ ಕಾಲ್ಪರ್ ಮಾಡಿ ಪ್ರಾಸೆಸ್ ಕೂಡಾ ಮಾಡಿದಿರಿ. ಆದರೆ ಈಗ ಒಂದು ಆರ್ಡರನ್ನು ಆರ್ಥಿಕ ವ್ಯವಸ್ಥೆ ಎಂದು ಹೇಳಿ ಕೊಟ್ಟಿದ್ದೀರಿ. ಈಗಾಗಲೇ ೬ ತಿಂಗಳು ಹಿಂದೆಯೇ ನೇಮಕಾತಿ ಆಗಬೇಕಾಗಿತ್ತು. ಈಗ ಅನೇಕ ಶಾಲೆಗಳಲ್ಲಿ ಬೆಳಿಗ್ಗೆ ಒಂದು ಮಧ್ಯಾಹ್ನ ಒಂದು ಪಾಳಿ ಕೆಲಸ ಆಗುತ್ತಿದೆ. ಎಷ್ಟೋ ಶಾಲೆಗಳು ಒನ್ ಬೈ-ಟೂ ಶಾಲೆಗಳಾಗಿವೆ. ಕೆಲವು ಕಡೆ ಶಾಲೆಗಳನ್ನು ಸ್ಯಾಂಕ್ಷನ್ ಮಾಡಿದ್ದು ಅಲ್ಲಿ ಟೀಚರ್ಸ್ ಇಲ್ಲ. ಟೀಚರ್ಸ್ ರೆಕ್ರೂಟ್ ಆಗಿಲ್ಲ ಎಂದು ಹೇಳಿ ಕೆಲವು ಕಡೆ ಶಾಲೆಗಳೇ ಪ್ರಾರಂಭವಾಗಿಲ್ಲ. ಒಂದೆರಡು ತಿಂಗಳಿನಲ್ಲಿ ಬೇಗ ನೇಮಕಾತಿ ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಇವರು ಮಾಡುವ ಅನ್ಯಾಯದಿಂದ ಮಕ್ಕಳು ಕಾನ್ವೆಂಟ್‌ಗೆ ಹೋಗುವುದು ಪ್ರೈವೇಟ್ ಸ್ಕೂಲ್‌ಗಳಿಗೆ ಹೋಗುವುದು ಜಾಸ್ತಿಯಾಗುತ್ತಿದೆ. ಒಂದು ಸ್ಕೂಲಿನಲ್ಲಿ ಒಬ್ಬ ಉಪಾಧ್ಯಾಯರು ೮೦ ಮಕ್ಕಳನ್ನು ನೋಡಿಕೊಳ್ಳಬೇಕು. ಈ ರೀತಿಯಾದರೆ ಮಕ್ಕಳ ವಿದ್ಯಾಭ್ಯಾಸ ಯಾವರೀತಿ ಆಗಬೇಕು? ಈ ತಿಂಗಳಲ್ಲಿ ಇದನ್ನು ಮಾಡುತ್ತಾರೆಯೇ ಎಂದು ಕೇಳುತ್ತೇನೆ,

ಶ್ರೀ ಬಿ. ಸೋಮಶೇಖರ್.—ತಾವು ಹೇಳುತ್ತಿರುವುದರಲ್ಲಿ ಸಾಕಾದಷ್ಟು ಸತ್ಯವಿದೆ. ಅದರ ಬಗ್ಗೆ ಸರ್ಕಾರ ಏಂಡಿತವಾಗಿ ಗಮನವಿಟ್ಟು ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಆದಷ್ಟು ಬೇಗ ಎನ್ನುವುದು ವೇಗ್‌ಟಫರ್ಮ್, ಯಾವಾಗ ಎನ್ನುವುದನ್ನು ಒಂದು ತಿಂಗಳು ಅಥವಾ ಎರಡು ತಿಂಗಳಲ್ಲಿ ಯಾವಾಗ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ.?

ಅಧ್ಯಕ್ಷರು.—ಮಾನ್ಯ ಕೊಟ್ರಪ್ಪನವರು ಇಂಥದ್ದನ್ನೆ ನೋಡಬೇಕು.

ಶ್ರೀ ಬಿ. ಜಿ. ಕೊಟ್ರಪ್ಪ.—ನಮ್ಮ ಕಮಿಟಿ ಮುಂದೆ ಆದು ಬಂದರೆ ನಾವು ನೋಡುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಎಂತಹ ಉತ್ತರಬೇಕು?

ಶ್ರೀ ಬಿ. ಸೋಮಶೇಖರ್.—ಅತಿ ಶೀಘ್ರವಾಗಿ ಅಂದರೆ ಅದರ ಅರ್ಥ ತಾವೇ ತಿಳಿದುಕೊಳ್ಳಿ. ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಂತ್ರಿಯವರೇ ವಿಚಾರ, ತಾವು ಈಗ ಪೂರ್ತಿ ಅಧಿಕಾರಿಗಳ ಸಮಿತಿಯನ್ನು ಮಾಡಿದ್ದೀರಿ, ಮೊದಲು ಸಮಿತಿಯಲ್ಲಿ ನಾನ್ ಆಫಿಶಿಯಲ್ಸ್ ಇದ್ದರು. ಅದರಲ್ಲಿ ಜನತಾ ಪಾರ್ಟಿಯ ನಾಯಕರುಗಳೇ ಇದ್ದರು. ಈಗ ಜಿಲ್ಲಾಪರಿಷತ್‌ನ ಮುಖ್ಯಕಾರ್ಯದರ್ಶಿಗಳನ್ನು ಅಧ್ಯಕ್ಷರನ್ನಾಗಿ ಮಾಡಿ, ಡಿಡಿಪಿಐ ಒಬ್ಬರು ಸದಸ್ಯರು ಇನ್ನೊಬ್ಬರನ್ನು ಸದಸ್ಯರನ್ನಾಗಿ ಮಾಡಿದ್ದೀರಿ. ನಾನ್ ಆಫಿಶಿಯಲ್ ರೆಪ್ರಸೆಂಟೇಟಿವ್ ಇದ್ದರೆ ಅವರು ಲೋಕಲ್ ಪರಿಸ್ಥಿತಿಯನ್ನು ಗಮನಿಸಿ ಬಡವರು ಯಾರಿದ್ದಾರೆ ಅಂತಹವರಿಗೆ ಕೆಲಸ ಕೊಡುತ್ತಿದ್ದರು. ಈಗ ಆಫಿಶಿಯಲ್ ಕಮಿಟಿಯಂವರು ಅವರು ಕೆಲವು ನಾಮ್ಸ್‌ಗಳನ್ನು ಇಟ್ಟು, ಕೆಲವು ನಾಮ್ಸ್‌ಗಳನ್ನು ಬಿಟ್ಟು ಕೆಲಸ ಮಾಡಿದರೆ ಜನತೆಗೆ ಕೊಟ್ಟಂತಹ ಆಶ್ವಾಸನೆಗಳನ್ನು ಸ್ಪಂದಿಸಲಿಕ್ಕೆ ತೊಂದರೆಯಾಗುವುದಿಲ್ಲವೆ? ಈಗಲಾದರೂ ನಾನ್ ಆಫಿಶಿಯಲ್ಸ್ ಮೆಂಬರ್ಸ್‌ಗಳನ್ನು ಇನ್‌ಕ್ಲೂಡ್ ಮಾಡಿ ಇಂತಹ ಪಾರ್ಟಿಯವರೆಂದು ನಾನು ಹೇಳುವುದಿಲ್ಲ, ಆ ಕಮಿಟಿಯಲ್ಲಿ ಇನ್‌ಕ್ಲೂಡ್ ಮಾಡುವುದಕ್ಕೆ ಪ್ರಯತ್ನ ಮಾಡಿ. ಇನ್ನು ಸೆಲೆಕ್ಷನ್ ಆಗುತ್ತಿಲ್ಲ ಆಫಿಶಿಯಲ್ ಕಮಿಟಿಯ ಬಗ್ಗೆ ಇಟ್ಟಿರುವ ಅಭಿಪ್ರಾಯವನ್ನು ನಾನ್ ಆಫಿಶಿಯಲ್ಸ್ ಬಗ್ಗೆ ಏತಕ್ಕೆ ಇಟ್ಟಿಲ್ಲ ನಾನ್ ಆಫಿಶಿಯಲ್ಸ್ ಏನು ಮಾಡಿದ್ದರು? ಅವರ ಮೇಲೆ ಕಂಪ್ಲೈಂಟ್ ಇತ್ತೆ, ಏತಕ್ಕೆ ಅವರನ್ನು ತೆಗೆದುಹಾಕಿದ್ದೀರಿ?

ಶ್ರೀ ಬಿ. ಸೋಮಶೇಖರ್.—ಕಮಿಟಿಯನ್ನು ಪುನರ್ ರಚನೆ ಮಾಡಿ ಏಳೆಂಟು ತಿಂಗಳುಗಳಾಗಿವೆ. ಈಗಾಗಲೇ ಆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ನಾನು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಸರ್ಕಾರ ಈಗಾಗಲೇ ಒಂದು ನಿರ್ಧಾರ ತೆಗೆದುಕೊಂಡು ಕಮಿಟಿಯನ್ನು ಪುನರ್ ರಚನೆ ಮಾಡಲಾಗಿದೆ. ಪುನರ್ ರಚನೆ ಮಾಡಿದಂತಹ ಕಮಿಟಿಯನ್ನು ಮಂತ್ರಿ ಪುನರ್ ರಚನೆ ಮಾಡತಕ್ಕ ಅವಶ್ಯಕತೆಯಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನ್ ಆಫಿಶಿಯಲ್ಸ್ ಇದ್ದಾಗ ಅವರೇನು ಲಂಚ ತೆಗೆದು ಕೊಳ್ಳುತ್ತಿದ್ದರೆ, ಅವರ ಮೇಲೆ ದೂರುಗಳು ಇದ್ದವೆ? ಅವರನ್ನು ಏತಕ್ಕೆ ತೆಗೆದಿದ್ದೀರಿ?

ಶ್ರೀ ಬಿ. ಸೋಮಶೇಖರ್,—ಅದು ಸರ್ಕಾರದ ಒಂದು ನಿರ್ಧಾರ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಸರಿಯಾದ ಉತ್ತರಗಳು ಬರುತ್ತಿಲ್ಲ. ಯದ್ವಾತದ್ವಾ ಉತ್ತರಗಳು ಬರುತ್ತಿವೆ. ವಿಧಾನಸಭೆಯಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ನಂ. ೧೨೪ (ಎ) ದಿನಾಂಕ ೨೬-೩-೮೭ರಲ್ಲಿ ಮಾನ್ಯ ಬಾಬುರೆಡ್ಡಿ ತುಂಗಳ್‌ರವರ ಪ್ರಶ್ನೆಗೆ ಉತ್ತರವಾಗಿ ಏನು ಹೇಳಿದ್ದೀರಿ ಅಂದರೆ ರಾಜ್ಯದಲ್ಲಿ ೩,೯೫೦ ಉರ್ದು ಪ್ರಾಥಮಿಕ ಶಾಲೆಗಳಿವೆ. ಅವುಗಳಲ್ಲಿ ೪, ೧೬, ೮೬೧ ಮಕ್ಕಳು ಕಲಿಯುತ್ತಿದ್ದಾರೆಂದು ಉತ್ತರ ಕೊಟ್ಟಿದ್ದಾರೆ ಆಮೇಲೆ ವಿಧಾನ ಪರಿಷತ್‌ನಲ್ಲಿ ಚುಕ್ಕೆ ಪ್ರಶ್ನೆ ನಂ, ೬೫೮ಕ್ಕೆ, ಅದು ಡಾ ಆಕ್ಬರ್ ಅಲಿಯವರ ಪ್ರಶ್ನೆ ದಿನಾಂಕ ೧೧-೩-೮೭ರಲ್ಲಿ ರಾಜ್ಯದಲ್ಲಿ ೨,೯೭೮ ಉರ್ದು ಪ್ರಾಥಮಿಕ ಶಾಲೆಗಳಿವೆ, ಆ ಶಾಲೆಗಳಲ್ಲಿ ೪,೧೬,೮೬೧ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿವೆ ಎಂದು ಹೇಳಿದ್ದೀರಿ. ವಿಧಾನಸಭೆಯಲ್ಲಿ ಮಾನ್ಯ ವೆಂಕಟರಾಮಯ್ಯನವರ ಪ್ರಶ್ನೆಗೆ ದಿನಾಂಕ ೭-೯-೮೭ರಂದು ರಾಜ್ಯದಲ್ಲಿ ೨೭೮೬ ಉರ್ದು ಶಾಲೆಗಳಿವೆ ಎಂದು ಹೇಳಿದ್ದೀರಿ, ಈ ತರಹ ಯದ್ವಾತದ್ವಾ ಉತ್ತರವನ್ನು ಹೇಳಿ ನಮಗೆ ಅಂಕಿಸಂಖ್ಯೆಗಳಲ್ಲಿ ಮೋಸ ಮಾಡುತ್ತಿದ್ದಾರೆಂದು ನಿಮ್ಮ ಮೇಲೆ ಸದಸ್ಯರುಗಳು ಪ್ರಿವಿಲೇಜ್ ನೋಟೀಸ್ ತರುತ್ತಾರೆ, ಇದನ್ನು ಬರೆದುಕೊಳ್ಳಿ ನಿಮ್ಮ ಡಿಪಾರ್ಟ್‌ಮೆಂಟ್‌ನ ಮೇಲೆ ಹಿಡಿತ ಇರಬೇಕು, ಯಾರು ಈ ತರಹ ಉತ್ತರಗಳನ್ನು ಕೊಟ್ಟಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ. ಸೋಮಶೇಖರ್.—ಅದನ್ನು ನೋಡಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನಾವು ಹೇಳಬೇಕಾಗುತ್ತದೆ, ಶಾಸಕರು ಹೇಳಬೇಕಾಗುತ್ತದೆ. ನಿಮ್ಮ ಡಿಪಾರ್ಟ್‌ಮೆಂಟ್‌ನವರು ಯದ್ವಾತದ್ವಾ ಉತ್ತರಗಳನ್ನು ಕೊಟ್ಟಿದ್ದಾರೆ. ಅಸೆಂಬ್ಲಿಗೆ ಒಂದು ಉತ್ತರ ಕೌನ್ಸಿಲ್ಲಿಗೆ ಒಂದು ಉತ್ತರ ಏನು ಕೊಟ್ಟಿದ್ದಾರೆ ಅದನ್ನು ನೋಡಿ ಎನ್‌ಕ್ವಾಯರಿ ಮಾಡಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಬಾಬುರೆಡ್ಡಿ ಎ. ತುಂಗಳ್.—ವಿದ್ಯಾ ಇಲಾಖೆಯ ಹೆಸರನ್ನು ಬದಲಾವಣೆ ಮಾಡಿ ಎಡುಬಿಡುಂಗಿ ಇಲಾಖೆಯೆಂದು ಮಾಡಿಯೆಂದು ಹೇಳುತ್ತೇನೆ.

೧೦–೩೦ ಎ.ಎಂ.

3. ಮೈಸೂರು ನಗರದಲ್ಲಿನ ಸರ್ಕಾರಿ ಮುದ್ರಣಾಲಯದಲ್ಲಿ ಕಳೆದ ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರನ್ನು ಖಾಯಂ ಮಾಡದಿರುವ ಬಗ್ಗೆ

ಶ್ರೀ ವೇದಾಂತ ಡೆವಿ ಮೈಗೆ.—ಮೈಸೂರು ನಗರದಲ್ಲಿನ ಸರ್ಕಾರಿ ಮುದ್ರಣಾಲಯದಲ್ಲಿ ಕಳೆದ ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರನ್ನು ಖಾಯಂ ಮಾಡದಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ವಿಧಾನಸಭಾವಿಕಿ ಮಂತ್ರಿಗಳು).— ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ ಮೈಸೂರು ಇದು ಸಾರ್ವಜನಿಕ ಶಿಕ್ಷಣ ಇಲಾಖೆಯ ಪಠ್ಯ ಪುಸ್ತಕ ನಿರ್ದೇಶನಾಲಯದ್ಕೆ ಆಡಳಿತ ವ್ಯಾಪ್ತಿಗೆ ಬರುವುದು.

ಪಠ್ಯ ಪುಸ್ತಕ ಮುದ್ರಣಾಲಯದಲ್ಲಿ ತಾಂತ್ರಿಕ ಹುದ್ದೆಗಳಿದ್ದು ಆವುಗಳನ್ನು ಮಾತ್ರ ಕೇಂದ್ರ ಮುದ್ರಣಾಲಯದ ನಿಯಮಗಳಂತೆ ವ್ಯವಹರಿಸಲು ಕಾರ್ಯಕಾರಿ ಆದೇಶವನ್ನು ಹೊರಡಿಸಿ ತಾತ್ಕಾಲಿಕವಾಗಿ ಅನುಸರಿಸಲಾಗುತ್ತಿತ್ತು. ಶಾಸನ ಬದ್ಧವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ಹುದ್ದೆಗಳನ್ನು ತುಂಬುವುದೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶದಂತೆ ಸದರಿ ನಿಯಮಗಳನ್ನು ರಚಿಸಿ ನಿರ್ದೇಶಕರು ಈಗ ತಾನೆ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅವುಗಳನ್ನು ಪರಿಶೀಲಿಸಲಾಗುತ್ತಿದೆ.

ಈಗಾಗಲೇ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಖಾಲಿ ಇರುವ ಹುದ್ದೆಗಳಲ್ಲಿ ೨೦ ವರ್ಷದ ಒಪ್ಪಂದದ ಪ್ರಕಾರ ಕೆಲಸ ಮಾಡಲು ಅಭ್ಯರ್ಥಿಗಳನ್ನು ನೇಮಿಸಿಕೊಂಡು ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯದ ಮುದ್ರಣ ಶಕ್ತಿಯನ್ನು ಪೂರ್ತಿ ಉಪಯೋಗಿಸಿಕೊಂಡು ಮುದ್ರಣ ಕಾರ್ಯವನ್ನು ನಡೆಸಲಾಗುತ್ತಿದೆ.

ಪಠ್ಯಪುಸ್ತಕ ಮುದ್ರಣಾಲಯದಲ್ಲಿ ದಿನಗೂಲಿ ನೌಕರರ ನೇಮಕಾತಿ ವ್ಯವಸ್ಥೆ ಇರುವುದಿಲ್ಲ. ಈಗಾಗಲೇ ಕೆಲಸ ಮಾಡುತ್ತಿರುವ ಸದರಿ ಕೆಲಸಗಾರರು ಸಹ ವಿದ್ಯಾರ್ಹತೆ ಮತ್ತು ಅನುಭವಗಳೊಂದಿಗೆ ಶಾಸನ ಬದ್ಧವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದನಂತರ ಬಹಿರಂಗ ನೇಮಕಾತಿಯ ವ್ಯವಸ್ಥೆಯಲ್ಲಿ ಭಾಗವಹಿಸಲು ಅಭ್ಯಂತರವಿರುವುದಿಲ್ಲ. ಆದ್ದರಿಂದ ಅಲ್ಲಿನ ಯಾವ ವಿಧವಾದ ತಾತ್ಕಾಲಿಕ ಕೆಲಸಗಾರರ ಖಾಯಂ ವ್ಯವಸ್ಥೆ ಉದ್ಭವಿಸುವುದಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರು ಅರ್ಹತೆ ಬಂದರೆ, ವಿದ್ಯಾರ್ಹತೆಗಳಿದ್ದರೆ, ಶಾಸನಬದ್ಧವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದ ನಂತರ ಅವರು ಬಹಿರಂಗವಾಗಿ ಕೆಲಸಕ್ಕೆ ಅರ್ಜಿಯನ್ನು ಹಾಕಿಕೊಳ್ಳಬಹುದೆಂದು ಹೇಳಿದ್ದಾರೆ, ನಾನು ಕೇಳಬೇಕಾದ ಪ್ರಶ್ನೆ ಇಷ್ಟೆ. ಸರ್ಕಾರಿ ಮುದ್ರಣಾಲಯದಲ್ಲಿರತಕ್ಕ ನೌಕರರಿಗೆ, ಅದೇ ರೀತಿ ಯಾವುದೇ ಮುದ್ರಣಾಲಯದಲ್ಲಿ ಇರತಕ್ಕ ನೌಕರರಿಗೆ ಕನಿಷ್ಟ ವೇತನ ಕಾಯಿದೆ ಜಾರಿಯಲ್ಲಿದೆ. ಈ ಒಂದು ಮುದ್ರಣಾಲಯದಲ್ಲಿ ಸುಮಾರು ೨೦೦ ಕೆಲಸಗಾರರು ಕಳೆದ ೧೦ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಅವರ ವಯಸ್ಸನ್ನು ಈಗ ೪೦–೪೫ರ ವರೆಗೆ ಮುಟ್ಟಿದೆ. ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಬೆಂಗಳೂರಿನಲ್ಲಿರತಕ್ಕ ಕೇಂದ್ರ ಮುದ್ರಣಾಲಯಲ್ಲಿ ಕೆಲಸ ಮಾಡತಕ್ಕ ದಿನಗೂಲಿ ನೌಕರರಿಗೆ ೫೧೮ ರೂಪಾಯಿಗಳಂ ಪ್ಲಸ್ ಡಿ.ಎ. ಸೇರಿಸಿ ಸಂಬಳವನ್ನು ಸರ್ಕಾರಿ ಆದೇಶದ ಪ್ರಕಾರ ಕೊಡುತ್ತಿದ್ದಾರೆ. ಇವರು ಈ ಮುದ್ರಣಾಲಯದಲ್ಲಿ ಕಳೆದ ೧೦ ವರ್ಷಗಳಿಂದ ಕೆಲಸಮಾಡಿದ್ದಾರೆ. ಅವರಿಗೆ ೩೬೪ ರೂಪಾಯಿಗಳನ್ನು ಕೊಡುತ್ತಿದ್ದಾರೆ ಅವರಿಗೆ ವೇತನ ಕೊಡುತ್ತಿಲ್ಲ, ಭತ್ಯ ಕೊಡುತ್ತಿಲ್ಲ Is not Government violating its own minimum wages act so far as Governemnt Press, Mysore is concerned ?